# ಬ್ರಿಟೀಷ್ ಸರ್ಕಾರ ಮತ್ತು ಬ್ಲ್ಯೂ ಸ್ಟಾರ್ ಕಾರ್ಯಾಚರಣೆ

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ

ಜೂನ್ 1984ರಂದು ಘಟಿಸಿದ ಬ್ಲ್ಯೂ ಸ್ಟಾರ್ ಕಾರ್ಯಾಚರಣೆ ಸ್ವತಂತ್ರ ಭಾರತದಲ್ಲಿ ಸರ್ಕಾರ ತೆಗೆದುಕೊಂಡ ಅತ್ಯಂತ ವಿವಾದಿತ ಕಾರ್ಯಾಚರಣೆಯಾಗಿದೆ. ಸೌಮ್ಯವಾದಿ ಅಕಾಲಿಗಳ ಪ್ರಾಮುಖ್ಯತೆ ತಗ್ಗಿಸಲು, ತೀವ್ರವಾದಿಗಳ ಬೆಳೆಯುತ್ತಿರುವ ಶಕ್ತಿಯನ್ನು ಕಡೆಗಣಿಸಲಾಯಿತು. ಸ್ವರ್ಣಮಂದಿರದ ಒಳಗೆ ಸಿಖ್ ಉಗ್ರಪಂಥೀಯರು ಹೇರಳ ಪ್ರಮಾಣದ ಶಸ್ತ್ರಾಸ್ತ್ರಗಳೊಂದಿಗೆ ಗುಂಪು ಸೇರುವುದನ್ನು ತಪ್ಪಿಸುವ ಬದಲು, ಭಾರತ ಸರ್ಕಾರ ತಾತ್ಸಾರಭಾವ ತಾಳಿತು. ಸೌಮ್ಯವಾದಿ ಸಿಖ್ ರಾಜಕಾರಣಿಗಳು ತಮ್ಮ ಪ್ರಾಮುಖ್ಯತೆ ಕಳೆದುಕೊಳ್ಳುತ್ತಾರೆ ಎಂಬ ಆಲೋಚನೆ ಅವರದ್ದಾಗಿತ್ತು. 1984ರ ಚುನಾವಣೆಗೆ ಮುನ್ನ ಪೋಲಿಸ್–ಸೇನೆ ಜಂಟಿ ಕಾರ್ಯಾಚರಣೆ ಮೂಲಕ ಉಗ್ರಪಂಥೀಯರನ್ನು ಬಡಿದೋಡಿಸುವ ಮೂಲಕ ಉಗ್ರವಾದದಿಂದ ಪಂಜಾಬ್ ಹಾಗೂ ಭಾರತವನ್ನು ಕಾಪಾಡಿದ ಮಹಾನ್ ದೇಶಭಕ್ತಿಯ ಘೋಷಣೆಯೊಂದಿಗೆ 1984ರ ಚುನಾವಣೆ ಗೆಲ್ಲುವ ಲೆಖ್ಖಾಚಾರ ಹಾಕಿಕೊಳ್ಳಲಾಗಿತ್ತು ಎಂದೆನಿಸುತ್ತದೆ.

ಭಾರತ ಸರ್ಕಾರ ಈ ಬೆಳವಣಿಗೆಯನ್ನು ಬೇರೆಯ ದೃಷ್ಟಿಯಲ್ಲೇ ದಾಖಲಿಸಿದೆ. ಕೆಲವು ವರ್ಷಗಳ ಹಿಂದೆ ಬಿಡುಗಡೆಗೊಂಡ ಡಾ.ಪಿ.ಸಿ. ಅಲೆಕ್ಸಾಂಡರ್ ಅವರ ಸ್ಮರಣಸಂಚಿಕೆ ಕಾರ್ಯಕ್ರಮದಲ್ಲಿ ನಾನೂ ಕೂಡ ಭಾಗವಹಿಸಿದ್ದೆ. ಮೇ–ಜೂನ್ 1984ರ ಅವಧಿಯಲ್ಲಿ ಅವರು ಪ್ರಧಾನ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸವಹಿಸಿದ್ದರು. ಆದ್ದರಿಂದ ಆಗ ನಡೆದ ಘಟನಾವಳಿಗಳಿಗೆ ನೇರ ಸಾಕ್ಷಿಯಾಗಿದ್ದ ಅವರು ನಿಖರ ಮಾಹಿತಿಗಳನ್ನು ಬಲ್ಲವರಾಗಿದ್ದರು. ಬ್ಲ್ಯೂ ಸ್ಟಾರ್ ಕಾರ್ಯಾಚರಣೆ ಕುರಿತ ಅಧ್ಯಾಯದಲ್ಲಿ ತಿಳಿಸಿರುವಂತೆ, ಡಾ.ಪಿಸಿ ಅಲೆಕ್ಸಾಂಡರ್ ಹಾಗೂ ಸಂತ ಲೊಂಗೊವಾಲ್ ಅವರ ನಡುವೆ ಏರ್ಪಟ್ಟ ಸಮಾಲೋಚನೆ ವಿಫಲವಾದ ಬಳಿಕ ಮೇ 1984ರ ಅಂತ್ಯದಲ್ಲಿ ಜನರಲ್ಲ ವೈದ್ಯ ಅವರನ್ನು ಕರೆಸಿ ಸೇನಾ ಕಾರ್ಯಾಚರಣೆಗೆ ಸಿದ್ಧತೆ ನಡೆಸುವಂತೆ ನಿರ್ದೇಶಿಸಲಾಯಿತು. ಸೇನಾ ಕಾರ್ಯಾಚರಣೆಯು ಅಪ್ರತಿಮ ದೇಶಭಕ್ತರಾದ ಸಿಖ್ಖರ ಮನಸ್ಸಿನ ಮೇಲೆ ಯಾವ ಬಗೆಯ ಪ್ರಭಾವ ಬೀರಬಹುದು ಎಂದು ಅರಿಯಲು ಅಗತ್ಯ ಗುಪ್ತಚರ್ಯೆ ಮಾಹಿತಿ ಹಾಗೂ ರಾಜಕೀಯ ವಲಯದ ಅನಿಸಿಕೆಗಳನ್ನು ಪಡೆಯಲಾಗಿತ್ತೆ? ನಿಜಕ್ಕು ಭಾರತ ಸರ್ಕಾರಕ್ಕೆ ಅದರ ಆವಶ್ಯಕತೆ ಅನಿಸಲಿಲ್ಲ. ಬ್ಲ್ಯೂ ಸ್ಟಾರ್ ಕಾರ್ಯಾಚರಣೆಯ ನಂತರ ಸಿಖ್ ಸಮುದಾಯ ಪ್ರತ್ಯೇಕತಾ ಭಾವನೆ ಬೆಳಸಿಕೊಳ್ಳುವ ಜೊತೆಗೆ ಶ್ರೀಮತಿ ಇಂದಿರಾ ಗಾಂಧಿಯವರ ಹತ್ಯೆಗೆ ಮತ್ತು ದೇಶಾದ್ಯಂತ ಸಿಖ್ಖರ ನರಮೇಧಕ್ಕೆ ಕಾರಣವಾಯಿತು.

ಬ್ಲ್ಯೂ ಸ್ಟಾರ್ ಕಾರ್ಯಾಚರಣೆ ವಿವಾದದ ಕುರಿತು ನಾವು ಭಾರತದಲ್ಲಿ ವಾದವಿವಾದ ನಡೆಸುವಾಗಲೆ, ಬ್ರಿಟನ್‌ನಲ್ಲಿ ಇತ್ತೀಚೆಗೆ ಪ್ರಕಟಗೊಂಡ ಕೆಲವಾರು ದಾಖಲಾತಿಗಳ ವಿವರವು ಪ್ರಕರಣದ ಕುರಿತು ಭಿನ್ನ ಪ್ರಕಾರದ ಬೆಳಕು ಚೆಲ್ಲುತ್ತದೆ. 30 ವರ್ಷಗಳ ಅಂತರಾಳದಲ್ಲಿ ಇಂಗ್ಲೆಂಡ್‌ನಲ್ಲಿ ಗುಪ್ತ ದಾಖಲೆಗಳನ್ನು ಬಹಿರಂಗ ಪಡಿಸಲಾಗಿದೆ. 1984ರ ಫೆಬ್ರವರಿ ಮಾಹೆಯ ದಾಖಲಾತಿಗಳನ್ನು ಈಗ ಪ್ರಕಟಿಸಲಾಗಿದೆ. ಬಹು ಗೌಪ್ಯ ದಾಖಲಾತಿಗಳು ಇವು.

ಸ್ವರ್ಣ ಮಂದಿರದಿಂದ ಭಿನ್ನಮತೀಯ ಸಿಖ್ಖರನ್ನು ಹೊರ ದೂಡಲು ಯೋಜಿತ ಕಾರ್ಯತಂತ್ರದ ಕುರಿತು 10, ಡೋವ್‌ನಿಂಗ್ ಬೀದಿ ಕಚೇರಿಯ ಪ್ರಧಾನ ಕಾರ್ಯದರ್ಶಿ ಅವರು ವಿದೇಶಿ ಹಾಗೂ ಕಾಮನ್‌ವೆಲ್ತ್ ಕಚೇರಿಯ ಬ್ರಾಯನ್ ಫಾಲ್ ಅವರಿಗೆ 6 ಫೆಬ್ರವರಿ 1984ರಂದು ಪತ್ರ ಬರೆಯುತ್ತಾರೆ. ವಿದೇಶ ಕಾರ್ಯದರ್ಶಿ ಪ್ರಸ್ತಾಪದಂತೆ ಮುಂದುವರಿಯಬೇಕು ಎಂಬ ಇಂಗಿತ ಪ್ರಧಾನ ಮಂತ್ರಿಗಳದ್ದಾಗಿದೆ ಎಂದು ಅವರು ದಾಖಲಿಸಿದ್ದಾರೆ. ಸಲಹೆಗಾರರು ಭೇಟಿ ನೀಡಬೇಕು ಹಾಗೂ ಭಾರತೀಯರು ತಮ್ಮ ಯೋಜನೆಯಂತೆ ಮುಂದುವರಿಯುವ ಸಾಧ್ಯತೆ ಕುರಿತ ಟಿಪ್ಪಣಿಗಳನ್ನು ಗೃಹ ಕಾರ್ಯದರ್ಶಿಗಳಿಗೆ ನೀಡಬೇಕು ಎಂಬ ಇಂಗಿತ ಅವರಿಗಿದೆ, ಎಂದೂ ಸಹ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಹಾಗಿದ್ದಲ್ಲಿ, ಬ್ಲ್ಯೂ ಸ್ಟಾರ್ ಕಾರ್ಯಾಚರಣೆಯನ್ನು ಬ್ರಿಟೀಷರ ಸಲಹೆ ಮೇರೆಗೆ ಯೋಜಿಸಲಾಗಿತ್ತೆ?

ಸಂಧಾನ ಮಾತುಕತೆಗಳು ಮೇ 1984ರಲ್ಲಿ ಮುರಿದುಬಿದ್ದ ಕಾರಣ ಬ್ಲ್ಯೂ ಸ್ಟಾರ್ ಕಾರ್ಯಾಚರಣೆಯನ್ನು ಆದೇಶಿಸಲಾಯಿತು ಎಂಬ ಅಭಿಮತಕ್ಕೆ ತದ್ವಿರುದ್ಧವಾಗಿ, ಪುಣ್ಯ ಕ್ಷೇತ್ರವಾದ ಸ್ವರ್ಣ ಮಂದಿರದಿಂದ ಭಿನ್ನಮತೀಯ ಸಿಖ್ಖರನ್ನು ಹೊರಹಾಕುವ ಯೋಜನೆಕುರಿತು ಭಾರತ ಸರ್ಕಾರ ಬ್ರಿಟೀಷ್ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿತ್ತು ಎಂಬುದು ಇದರಿಂದ ದೃಢಪಡುತ್ತದೆ. ಪತ್ರದೊರೆತ ನಂತರ, ಬ್ರಯನ್ ಫಾಲ್ ಎಂಬುವವರು 23/2/1984 ದಿನಾಂಕದ ಪತ್ರವನ್ನು ಗೃಹ ಕಾರ್ಯದರ್ಶಿಯವರಿಗೆ ಬರೆಯುತ್ತಾರೆ. ಪ್ರಸ್ತಾಪಿತ ಕಾರ್ಯಾಚರಣೆಯಿಂದ ಇಂಗ್ಲೆಂಡ್‌ನಲ್ಲಿರುವ ಸಿಖ್ಖರ ಮೇಲಾಗುವ ಪ್ರಭಾವದ ಕುರಿತು ಈ ಪತ್ರ ಉಲ್ಲೇಖಿಸಿದೆ. ಅಮೃತ್‌ಸರ್‌ನಲ್ಲಿರುವ ಸ್ವರ್ಣ ಮಂದಿರದಿಂದ ಸಿಖ್ ಭಿನ್ನಮತೀಯರನ್ನು ತೆರವುಗೊಳಿಸುವ ಕುರಿತು ಭಾರತದ ಅಧಿಕಾರಿಗಳು ಬ್ರಿಟೀಷ್ ಸಲಹೆ ಕೋರಿದ್ದಾರೆ ಎಂದು ಸ್ಪಷ್ಟವಾಗಿ ಈ ಪತ್ರದಲ್ಲಿ ಬರೆಯಲಾಗಿದೆ. ಭಾರತದ ಕೋರಿಕೆಗೆ ಸಕಾರಾತ್ಮಕವಾಗಿ ಪ್ರತಿಕ್ರಯಿಸಲು ವಿದೇಶಾಂಗ ಕಾರ್ಯದರ್ಶಿಗಳು ನಿರ್ಧರಿಸಿದರು ಹಾಗೂ ಪ್ರಧಾನ ಮಂತ್ರಿಗಳ ಒಪ್ಪಂದದಂತೆ ಹಿರಿಯ ಸಲಹೆಗಾರರನ್ನು ಭಾರತಕ್ಕೆ ರವಾನಿಸಲಾಯಿತು. ಅವರು ರೂಪಿಸಿದ ಯೋಜನೆಗೆ ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ರುಜು ಹಾಕಿದರು. ಈ ಯೋಜನೆಯನ್ನು ಭಾರತ ಸರ್ಕಾರ ಇಷ್ಟರಲ್ಲೇ ಕಾರ್ಯರೂಪಕ್ಕೆ ತರಲಿದೆ ಎಂಬ ವಿಶ್ವಾಸವನ್ನು ವಿದೇಶಾಂಗ ಕಾರ್ಯದರ್ಶಿ ವ್ಯಕ್ತಪಡಿಸಿದ್ದಾರೆ. ಬಹು ಗೌಪ್ಯವಾದ ದಾಖಲಾತಿಗಳನ್ನು ಬಹಿರಂಗ ಪಡಿಸುವ ನೀತಿಯಂತೆ 30 ವರ್ಷಗಳ ನಂತರ ಬಿಡುಗಡೆಗೊಂಡ ದಾಖಲಾತಿಯ ಪ್ರಕಾರ ಈ ಪ್ರಕರಣದಲ್ಲಿ ಮುಂದುವರೆಯಲು ಶ್ರೀಮತಿ ಇಂದಿರಾ ಗಾಂಧಿಯವರಿಗೆ ನೀಡಿದ ಸಲಹೆಯ ಹಿಂದೆ ವಿದೇಶಿ ಕೈವಾಡವಿತ್ತು ಎಂದು ತಿಳಿದುಬರುತ್ತದೆ. 1984ರ ಮೇ ಅಂತ್ಯದ ವೇಳೆಗಷ್ಟೆ ಭಾರತೀಯ ಸೇನೆಗೆ ಇದರ ಮಾಹಿತಿ ನೀಡಲಾಗುತ್ತದೆ. ಈ ವಿಚಾರದಲ್ಲಿ ಸರ್ಕಾರದ ಒಳಗೆ ರಾಜಕೀಯ ಸಮಾಲೋಚನೆ ನಡೆಸಿರುವ ಸಾಧ್ಯತೆ ಕಡಿಮೆ. ಈ ವಿಚಾರದಲ್ಲಿ ಅನ್ಯ ರಾಷ್ಟ್ರಗಳೊಂದಿಗೂ ಸಮಾಲೋಚನೆ ನಡೆಸಲಾಗಿತ್ತೆ? 1984ರ ಫೆಬ್ರವರಿಯಲ್ಲೇ ಬಿಟೀಷ್ ಸರ್ಕಾರದ ಸಲಹೆ ಕೋರಿರಬೇಕಾದರೆ, ಸಮಸ್ಯೆಯನ್ನು ಪ್ರಾಥಮಿಕ ಹಂತದಲ್ಲೇ ನಿವಾರಿಸುವ ಅಥವಾ ಸ್ವರ್ಣ ಮಂದಿರದ ಒಳಗೆ ಜಮಾಯಿಸಿದ ಪ್ರತ್ಯೇಕತಾವಾದಿಗಳನ್ನು ಹೊರ ತೆಗೆಯಲು ಪರ್ಯಾಯ ಯೋಜನೆ ಭಾರತ ಸರ್ಕಾರಕ್ಕೆ ಇರಲಿಲ್ಲವೆಂದು ತಿಳಿದುಬರುತ್ತದೆ. ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆವುಂಟಾದರೂ, ಸಿಖ್ಖರ ಹಿತಾಸಕ್ತಿಗೆ ವಿರುದ್ಧವಾಗಿದ್ದರೂ, ಅದನ್ನು ಲೆಖ್ಖಿಸದ ಸರ್ಕಾರ ಸ್ವರ್ಣ ಮಂದಿರದ ಪವಿತ್ರ ಆವರಣದಲ್ಲಿ ಧಾಳಿ ನಡೆಸಲು ನಿರ್ಧರಿಸಿತ್ತು.

ಬ್ರಿಟೀಷರ ಕೆಲವು ದಾಖಲೆಗಳು ಬಹಿರಂಗಗೊಂಡು, ಅವು ನಮ್ಮ ಬಳಿಯಿವೆ. ಮುಂದಿನ ಕೆಲವು ತಿಂಗಳಲ್ಲಿ 1984ರ ಫೆಬ್ರವರಿ ಹಾಗೂ ಜೂನ್ ನಡುವೆಯ ದಾಖಲಾತಿಗಳನ್ನು 30 ವರ್ಷಗಳ ಅವಧಿ ಪೂರ್ಣಗೊಂಡ ನಂತರ ಬಿಡುಗಡೆಗೊಳಿಸಲಾಗುವುದು. ಈ ವಿಚಾರದಲ್ಲಿ ಸತ್ಯ ಸಂಗತಿಗಳನ್ನು ತಿಳಿಸುವ ಹೊಣೆಗಾರಿಕೆಯನ್ನು ಭಾರತ ಸರ್ಕಾರ ಪ್ರದರ್ಶಿಸುವ ಸಮಯ ಸಮೀಪಿಸಿದೆ. ಸತ್ಯ ಬೆಳಕಿಗೆ ಬಂದರೆ, ಬ್ಲ್ಯೂ ಸ್ಟಾರ್ ಕಾರ್ಯಾಚರಣೆಯು ಲೋಪಪೂರಿತ ಕಾರ್ಯತಂತ್ರವಾಗಿತ್ತೆ ಎಂದು ನಿರ್ಧರಿಸಲು ಭಾರತದ ಜನತೆಗೆ ಸಾಧ್ಯವಾಗಲಿದೆ.